# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 623 (601) |
| ಸದಸ್ಯರ ಹೆಸರು | : | ಶ್ರೀ. ಬಿ.ಎಂ.ಫಾರೂಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣಕನ್ನಡ ಜಿಲ್ಲೆ ಮಂಗಳೂರಿನ ಉಳ್ಳಾಲ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ "ಫಿಶ್‌ಮೀಲ್" ಉದ್ದಿಮೆಗಳಿಂದ ಹೊರ ಬರುವ ತ್ಯಾಜ್ಯವು ಪರಿಸರದ ಮೇಲೆ ಹಾನಿ ಉಂಟು ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ:</td><td>ಸರ್ಕಾರದ ಗಮನಕ್ಕೆ ಬಂದಿದೆ</td></tr>
<tr><td>ಆ)</td><td>ಬಂದಿದ್ದಲ್ಲಿ, ಈ ಉದ್ದಿಮೆಗಳಿಂದ ಹೊರಬರುವ ಮಲಿನ ತ್ಯಾಜ್ಯಗಳನ್ನು ಸರಿಯಾದ ವೈಜ್ಞಾನಿಕ ಕ್ರಮದಲ್ಲಿ ನಿರ್ವಹಿಸಿ ವಿಲೇವಾರಿ ಮಾಡುವ ಕುರಿತು ಸದರಿ ಉದ್ದಿಮೆಗಳಿಗೆ ಯಾವ ನಿರ್ದಿಷ್ಟ ಸೂಚನೆ ನೀಡಲಾಗಿದೆ; ಕಾನೂನು ನಿಯಮಗಳನ್ನು ಉಲ್ಲಂಘಿಸಿ ಪರಿಸರಕ್ಕೆ ಹಾನಿ ಉಂಟು ಮಾಡುತ್ತಿರುವ ಉದ್ದಿಮೆಗಳ ಮೇಲೆ ಕೈಗೊಂಡ ಶಿಸ್ತು ಕ್ರಮಗಳೇನು; (ಅಂಕಿ ಅಂಶಗಳೊಂದಿಗೆ ವಿವರ ನೀಡುವುದು)</td><td rowspan="2">ಉಳ್ಳಾಲ ಪ್ರದೇಶದಲ್ಲಿ 13 ಫಿಶ್‌ಮೀಲ್ ಮತ್ತು 1 ಸಾಮಾನ್ಯ ಕಲುಷಿತ ನೀರು ಶುದ್ಧೀಕರಣ ಘಟಕವು ಕಾರ್ಯನಿರ್ವಹಿಸುತ್ತಿವೆ.<br><br>ಉಳ್ಳಾಲ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಮುಖವಾಗಿ ಫಿಶ್ ಮೀಲ್ ಉದ್ದಿಮೆಗಳಿಂದ ವಾಸನೆ ಬರುತ್ತಿರುವುದರ ಬಗ್ಗೆ ದೂರುಗಳು ಬಂದಿರುತ್ತವೆ.<br><br><u>ಜಲ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ:</u><br><br>ಉಳ್ಳಾಲ ಪ್ರದೇಶದಲ್ಲಿರುವ 13 ಫಿಶ್‌ಮೀಲ್ ಘಟಕಗಳಲ್ಲಿ ಒಟ್ಟಾರೆ ಗೃಹ ಬಳಕೆ, ಬಾಯ್ಲರ್ ಮತ್ತು ಕೂಲಿಂಗ್ ಟವರ್‌ಗಳಲ್ಲಿ ಉಪಯೋಗಿಸಲಾಗುವ ನೀರಿನ ಪ್ರಮಾಣ ಮತ್ತು ವಿಸರ್ಜಿಸಲಾಗುವ ಕಲುಷಿತ ನೀರಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ.<br><br>
<table>
<tr><th rowspan="2">Total Numbers of Fish Meals</th><th colspan="2">Water Consumption (in KLD)</th><th colspan="2">Waste Water Discharge (in KLD)</th></tr>
<tr><th>Domestic/ Boiler/ Cooling water</th><th>Manufacturing Process</th><th>Domestic/ Boiler/ Cooling</th><th>Manufacturing Process (Originate from Fish Boiling Process)</th></tr>
<tr><td>13</td><td>242.25</td><td>Nil</td><td>81.2</td><td>428.2</td></tr>
</table>
</td></tr>
<tr><td>ಇ)</td><td>ಸದರಿ ಉದ್ದಿಮೆಗಳು ಕಡ್ಡಾಯವಾಗಿ ಅಳವಡಿಸಿ ಹಾಗೂ ಕಾಲಕಾಲಕ್ಕೆ ಬದಲಾಯಿಸಬೇಕಾದ "BIO-FILTER" ಗಳನ್ನು ಸೂಕ್ತ ಕ್ರಮದಲ್ಲಿ ನಿರ್ವಹಿಸದೇ, ಮಲಿನ ತ್ಯಾಜ್ಯ ನದಿ-ಕಾಲುವೆಗಳನ್ನು ಸೇರುತ್ತಿದ್ದು, ಈ ಭಾಗದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ, ನೈರ್ಮಲ್ಯದ ಕೊರತೆ, ಕಲುಷಿತ ಗಾಳಿಯಿಂದ ನರಳುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td></tr>
</table>

ಹೀಗೆ ಉತ್ಪತ್ತಿಯಾಗುವ ಕಲುಷಿತ ನೀರನ್ನು ಸಂಗ್ರಹಿಸಿ, ಉದ್ದಿಮೆಗಳ ಆವರಣದಲ್ಲಿಯೇ ಪ್ರಾಥಮಿಕ ಹಂತದ ಸಂಸ್ಕರಣಾ ಘಟಕವನ್ನು (Primary Treatment Plant) ಅಳವಡಿಸಿ ಪ್ರಥಮ ಹಂತವಾಗಿ ಸಂಸ್ಕರಿಸುವಂತೆ, ತದನಂತರ ಫಿಶ್‌ಮೀಲ್‌ನವರು ಸ್ಥಾಪಿಸಿರುವ ಸಾಮಾನ್ಯ ಕಲುಷಿತ ನೀರು ಶುದ್ಧೀಕರಣ ಘಟಕದಲ್ಲಿ ಸಂಸ್ಕರಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ (KSPCB) ನೀಡಲಾದ ಸಮ್ಮತಿ ಪತ್ರಗಳಲ್ಲಿ ಷರತ್ತು ವಿಧಿಸಲಾಗಿದೆ. ಅದರಂತೆ ಉದ್ದಿಮೆಗಳು ಪ್ರಥಮ ಹಂತದ ಶುದ್ಧೀಕರಣ ವ್ಯವಸ್ಥೆ ಇನ್ನೂ ಪಾಲಿಸಬೇಕಾಗಿದೆ. ಸದರಿ ಉದ್ದಿಮೆಗಳು ತಮ್ಮ ಘಟಕದಲ್ಲಿ ಉತ್ಪತ್ತಿಯಾಗುವ ಕಲುಷಿತ ನೀರನ್ನು ಸಿಮೆಂಟಿನ ತೊಟ್ಟಿಗಳಲ್ಲಿ ಸಂಗ್ರಹಿಸಿ ಪೈಪ್ ಲೈನ್ ಮೂಲಕ ಸಾಮಾನ್ಯ ಶುದ್ಧೀಕರಣ ಘಟಕಕ್ಕೆ (CETP) ಸಾಗಿಸುತ್ತಿದ್ದಾರೆ.

ಸದರಿ ಸಾಮಾನ್ಯ ಕಲುಷಿತ ನೀರು ಶುದ್ಧೀಕರಣ ಘಟಕಕ್ಕೆ ಮಂಡಳಿಯಿಂದ ಸಮ್ಮತಿ ನೀಡುವಾಗ ಶುದ್ಧೀಕರಿಸಿದ ನೀರು ನಿಗದಿತ ಮಾನದಂಡಕ್ಕೆ ಸರಿಹೊಂದಿದ್ದಲ್ಲಿ ಸಮುದ್ರದ ನೀರಿಗೆ ವಿಸರ್ಜಿಸಲು ಷರತ್ತು ವಿಧಿಸಲಾಗಿದೆ. ಆದರೆ ದಿನಾಂಕ: 31.12.2022ರ ವಿಶ್ಲೇಷಣಾ ವರದಿ ಪ್ರಕಾರ ಮಾಪಕಗಳಾದ COD-445 mg/l (against prescribed standard of 250 mg/l), TKN – 62 mg/l (against prescribed standard of 50 mg/l), Nitrate – 58 mg/l (against prescribed standard of 50 mg/l) ಹಾಗಾಗಿ ಇದು ಉಲ್ಲಂಘನೆಯಾಗಿದೆ.

**<u>ವಾಯು ಮಾಲಿನ್ಯ ನಿಯಂತ್ರಣಕ್ಕೆ ಕ್ರಮ:</u>**

ಕುಕ್ಕರ್, ಡ್ರೈಯರ್ ಮತ್ತು ಎವಾಪೋರೇಟರ್ ನಂತಹ ಉಪಕರಣಗಳಿಂದ ಉತ್ಪತ್ತಿಯಾಗುವ ವಾಸನೆಯನ್ನು ತಡೆಗಟ್ಟಲು condenser ಮತ್ತು scrubber ಗಳನ್ನು ಅಳವಡಿಸಿ Bio-filter ಗಳ ಮೂಲಕ ಹಾಯಿಸಿ, ವಾಸನೆಯನ್ನು ಕಡಿಮೆ ಮಾಡುವಂತೆ ಹಾಗೂ ಉದ್ದಿಮೆಯ ಎಲ್ಲಾ ಉಪಕರಣಗಳನ್ನು ಕಾಲಕಾಲಕ್ಕೆ ಸುಸಜ್ಜಿತವಾಗಿ ಇಟ್ಟುಕೊಳ್ಳುವಂತೆ KSPCB ವತಿಯಿಂದ ನೀಡಲಾದ ಸಮ್ಮತಿ ಪತ್ರಗಳಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ.

ಅದರಂತೆ, ಎಲ್ಲಾ ಉದ್ದಿಮೆಗಳು ಬಯೋ ಫಿಲ್ಟರ್ ಗಳನ್ನು ಅಳವಡಿಸಿಕೊಂಡಿವೆ. ಆದರೆ ಇವುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸನೆ ಇರುವುದರ ಬಗ್ಗೆ ದೂರುಗಳು ಬಂದಿರುತ್ತವೆ.

**<u>ಘನತ್ಯಾಜ್ಯ ವಸ್ತು</u>**

ಫಿಶ್ ಮೀಲ್‌ಗಳಲ್ಲಿ ಮೀನುಗಳನ್ನು ಸಂಪೂರ್ಣವಾಗಿ ವಿವಿಧ ಉಪ-ಉತ್ಪನ್ನಗಳನ್ನು ತಯಾರಿಸಲು ಬಳಸುವುದರಿಂದ ಇಲ್ಲಿ ಉತ್ಪಾದನಾ ಚಟುವಟಿಕೆಗಳಿಂದ ಯಾವುದೇ ಘನತ್ಯಾಜ್ಯ ವಸ್ತು ಉತ್ಪತ್ತಿಯಾಗುವುದಿಲ್ಲ (There is no cutting of head and tail of the fish)

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗೊಂಡ ಕ್ರಮಗಳು:**

ಉಳ್ಳಾಲದಲ್ಲಿ ಕಾರ್ಯಾಚರಣೆಯಲ್ಲಿರುವ ಫಿಶ್‌ಮೀಲ್ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಧಿಸಿದ್ದ ನಿಬಂಧನೆಗಳನ್ನು ಸಂಪೂರ್ಣವಾಗಿ ಪಾಲಿಸದ ಕಾರಣ ಮತ್ತು ಈ ಹಿಂದೆ ಮಂಡಳಿಯಿಂದ ನೀಡಲಾದ ಸಮ್ಮತಿ ಪತ್ರದ ನಿಬಂಧನೆಗಳನ್ನು ಉಲ್ಲಂಘಿಸಿದ್ದರಿಂದ, ಸದರಿ ಉದ್ದಿಮೆಗಳಿಗೆ ದಿನಾಂಕ: 05.08.2022 ರಂದು ಮಂಡಳಿಯಿಂದ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಅಧಿನಿಯಮ 33(ಎ) ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಧಿನಿಯಮ 31 (ಎ) ರ ಅಡಿಯಲ್ಲಿ ಮುಚ್ಚುವ ಆದೇಶವನ್ನು ನೀಡಲಾಗಿರುತ್ತದೆ.

ಈ ನಿರ್ದೇಶನಗಳ ವಿರುದ್ಧ ಉದ್ದಿಮೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P. ಸಂಖ್ಯೆ: 16165/22, 16306/22,16308/22, 16310/22, 16312/22, 16432/22, 16435/22, 16441/22, 16442/22, 16453/22, 16456/22, 16459/22 ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿದ ಮುಚ್ಚುವ ಆದೇಶಗಳನ್ನು ಕಾರಣ ಕೇಳುವ ನೋಟಿಸುಗಳನ್ನಾಗಿ ಪರಿವರ್ತಿಸಲು ನಿರ್ದೇಶಿಸಿದೆ. ಅಲ್ಲದೇ ಅರ್ಜಿದಾರರಿಗೆ ಒಂದು ವಾರಗಳ ಕಾಲಾವಕಾಶ ನೀಡಿ ಹೆಚ್ಚುವರಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಹಾಗೂ ಉದ್ದಿಮೆದಾರರು ಸಲ್ಲಿಸಿದ್ದ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಮಂಡಳಿಯು ನಿಯಮಾನುಸಾರ ಹೊಸ ಆದೇಶವನ್ನು ನೀಡಲು ಮಾನ್ಯ ನ್ಯಾಯಾಲಯವು ನಿರ್ದೇಶಿಸಿರುತ್ತದೆ.

ತದನಂತರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸದರಿ ಉದ್ದಿಮೆಗಳು, ಅನುಪಾಲನಾ ವರದಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತವೆ. ಅಲ್ಲದೆ, ಅವುಗಳೊಂದಿಗೆ ಸಮ್ಮತಿ ಪತ್ರದ ನವೀಕರಣಕ್ಕಾಗಿ ಅರ್ಜಿಗಳನ್ನು ಆಗಸ್ಟ್– 2022 ರಿಂದ ಡಿಸೆಂಬರ್ -2022 ಅವಧಿಯಲ್ಲಿ ವಿವಿಧ ದಿನಾಂಕಗಳಂದು ಸಲ್ಲಿಸಿದ್ದು, ಸದರಿ ಕೈಗಾರಿಕೆಗಳನ್ನು ಮಂಡಳಿಯ ವತಿಯಿಂದ ದಿನಾಂಕ: 09.02.2023 ರಂದು ಪರಿವೀಕ್ಷಣೆ ಮಾಡಲಾಗಿದೆ.

ಉದ್ದಿಮೆದಾರರು ಸಲ್ಲಿಸಿದ್ದ ಅನುಪಾಲನಾ ವರದಿಗಳು ಸಮರ್ಪಕವಾಗಿಲ್ಲದ ಕಾರಣ ಮತ್ತು ಉದ್ದಿಮೆದಾರರಿಗೆ ಅವಕಾಶವನ್ನು ನೀಡ ಬೇಕಾದ ಕಾರಣ ಫಿಶ್‌ಮೀಲ್ ಉದ್ದಿಮೆಗಳೊಂದಿಗೆ ಮಾರ್ಚ್ -2023 ರಿಂದ ಅಕ್ಟೋಬರ್-2023ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ಮೌಖಿಕ ವಿಚಾರಣೆ ನಡೆಸಲಾಗಿದೆ.

| | | |
|---|---|---|
| | | ಮಂಡಳಿಯು ಉದ್ದಿಮೆಗಳ ಮೌಖಿಕ ವಿಚಾರಣೆ ಹಾಗೂ ಪರಿವೀಕ್ಷಣೆ ಸಂದರ್ಭಗಳಲ್ಲಿ ಗಮನಿಸಿದ್ದ ಸಮ್ಮತಿ ಪತ್ರದ ಷರತ್ತುಗಳ ಉಲ್ಲಂಘನೆಗಳಿಗೆ ಉದ್ದಿಮೆದಾರರು ನೀಡಿದ ಅನುಪಾಲನಾ ವರದಿಯನ್ನು ಪರಿಶೀಲಿಸಿಕೊಂಡು ಇವುಗಳು ಅಸಮರ್ಪಕವಾಗಿದ್ದರಿಂದ ಸದರಿ ಉದ್ದಿಮೆಗಳು ಸಲ್ಲಿಸಿದ್ದ ಸಮ್ಮತಿ ಪತ್ರದ ನವೀಕರಣದ ಅರ್ಜಿಗಳನ್ನು ತಿರಸ್ಕರಿಸಲು ನಿರ್ಧಾರ ಕೈಗೊಂಡಿರುತ್ತದೆ.<br><br>ಅದರಂತೆ ಉದ್ದಿಮೆಗಳು ಸಲ್ಲಿಸಿದ್ದ ಸಮ್ಮತಿ ಪತ್ರಗಳ ಅರ್ಜಿಗಳನ್ನು ನಿಯಮಾನುಸಾರ ನಿರಾಕರಿಸಿ ಜೂನ್-2023 ರಿಂದ ನವೆಂಬರ್-2023ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಆದೇಶಿಸಿರುತ್ತದೆ.<br><br>ಸದರಿ ಸಮ್ಮತಿ ಪತ್ರಗಳ ನಿರಾಕರಣೆಯ ನಂತರ ಉದ್ದಿಮೆಗಳ ಕಾರ್ಯಾಚರಣೆಯ ಸ್ಥಿತಿಯನ್ನು ದಿನಾಂಕ: 29.11.2023 & 01.12.2023 ರಂದು ಸ್ಥಳ ಪರಿಶೀಲನೆ ನಡೆಸಿ, ಮಹಜರ್ ಕಾರ್ಯವನ್ನು ಕೈಗೊಂಡು ಕಲುಷಿತ ನೀರಿನ ಮಾದರಿಗಳನ್ನು ಕಾನೂನು ರೀತಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಗ್ರಹಿಸಿದೆ. ವಿಶ್ಲೇಷಣಾ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಉಲ್ಲಂಘಿಸಿರುವ ಉದ್ದಿಮೆಗಳ ವಿರುದ್ಧ ಮಂಡಳಿಯ ವತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಈ) | ಹಾಗಿದ್ದಲ್ಲಿ ದೇಶದ ಹಸಿರು ನ್ಯಾಯಾಧೀಕರಣದ ಸೂಚನೆಗಳನ್ನು ಸರಿಯಾದ ಕ್ರಮದಲ್ಲಿ ಜಾರಿಗೊಳಿಸುತ್ತಾ, ಪರಿಸರದ ಮೇಲಾಗುತ್ತಿರುವ ಹಾನಿ, ದುಷ್ಪರಿಣಾಮ ಮತ್ತು ಸ್ಥಳೀಯ ನಾಗರೀಕರ ಜೀವನ ಮಟ್ಟ ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು? (ಅಂಕಿ ಅಂಶಗಳೊಂದಿಗೆ ವಿವರ ನೀಡುವುದು) | ಫಿಶ್‌ಮೀಲ್ ಉದ್ದಿಮೆಗಳು ಸಲ್ಲಿಸಿದ ಸಮ್ಮತಿ ಪತ್ರ ಅರ್ಜಿಗಳ ನಿರಾಕರಣೆಯ ನಂತರ ಉದ್ದಿಮೆಗಳ ಕಾರ್ಯ ನಿರ್ವಹಿಸುತ್ತಿರುವ ಸ್ಥಿತಿಯನ್ನು ದಿನಾಂಕ: 29.11.2023 & 01.12.2023 ರಂದು ಉದ್ದಿಮೆಗಳ ಸ್ಥಳ ಪರಿಶೀಲನೆ ನಡೆಸಿ, ಮಹಜರ್ ಕಾರ್ಯವನ್ನು ಕೈಗೊಂಡು ಕಲುಷಿತ ನೀರಿನ ಮಾದರಿಗಳನ್ನು ಕಾನೂನು ರೀತಿಯಲ್ಲಿ (Legal Sample as per Act) ಸಂಗ್ರಹಿಸಿದೆ. ವಿಶ್ಲೇಷಣಾ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಉಲ್ಲಂಘಿಸಿರುವ ಉದ್ದಿಮೆಗಳ ವಿರುದ್ಧ ಮಂಡಳಿಯ ವತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಅಪಜೀ 268 ಇಎನ್‌ವಿ 2023

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು